ಅಯ್ಯಂಗಾರ್‌ರಂತಹ ಸಾಹಿತ್ಯ ದಿಗ್ಗಜರನ್ನು ಕೊಟ್ಟ ಕಾರಣಕ್ಕಾಗಿ ಜಿಲ್ಲೆಯ ಬಗ್ಗೆ ಹೆಮ್ಮೆಯಿದೆ. ಆದರೆ, ಅದೇ ಹಾಸನ ಜಿಲ್ಲೆಯಲ್ಲಿ ಪದೇ ಪದೇ ದಲಿತರ ಮೇಲೆ ದೌರ್ಜನ್ಯಗಳು ಜರುಗುತ್ತಿವೆ. ಇದು ದಲಿತರ ದುಃಖಕ್ಕೆ ಕಾರಣ. ಈ ದುಃಖ ಆರುವುದೆಂದು? ಲೇಖಕರ ಈ ದುಃಖವನ್ನು ಓದುಗರದೂ ಆಗಿಸುವಲ್ಲಿ ಸುಬ್ಬು ಅವರ ಬರಹದ ಯಶಸ್ಸಿದೆ.

ಕೇರಿಯವರು ಹಾಕಿದ 'ಅಂಬೇಡ್ಕರ್ ನಗರ'ವೆಂಬ ಬೋರ್ಡನ್ನು ಕಿತ್ತುಹಾಕಿದಾಗ ಲೇಖಕರಿಗೆ ಸಹಜವಾಗಿ ದುಃಖವಾಗಿದೆ. ಶಿಕ್ಷಣ ಪಡೆದಂತೆ, ಬದಲಾವಣೆಯ ಗಾಳಿ ಬೀಸಿ 'ಅಂಬೇಡ್ಕರ್ ಭವನ' ನಿರ್ಮಾಣವಾಗಿ, ಸಹಬಾಳ್ವೆಯ ಹೆಜ್ಜೆಗಳು ಕಾಣಿಸುತ್ತಿವೆ. ಆಗ ಲೇಖಕರು ಮತ್ತಷ್ಟು ಪುಟ್ಟ ಪುಟ್ಟ ಅಂಬೇಡ್ಕರರು ಹುಟ್ಟಬೇಕೆಂಬ ನಿರಾಳ ಮನಸ್ಸಿನ ಕನಸು ಕಾಣುತ್ತಾರೆ.

ಮನುಷ್ಯರ ಸುಖದುಃಖಗಳು ಮನುಷ್ಯರೆಲ್ಲರಿಗೂ ಸೇರಿದವಲ್ಲವೇ? ಎಂದು ಪ್ರಶ್ನಿಸುವ ಲೇಖಕರು ಕಂಬಾಲಪಲ್ಲಿ ಘಟನೆ ಕೇಳಿ ಬೆಚ್ಚಿಬೀಳುತ್ತಾರೆ. ದುಃಖ, ಸಂಕಟಕ್ಕೆ ಒಳಗಾಗುತ್ತಾರೆ. ಸಂಕಟವೆಂದರೆ ಹೊಟ್ಟೆಯಲ್ಲಿ ಹುಟ್ಟುವುದಲ್ಲವೇ? ಸಂಕಟ ಹುಟ್ಟಲು ವೈಜ್ಞಾನಿಕವಾಗಿ ಒಂದು ಕಾರಣವಿದೆ. ಕರುಳಿನಲ್ಲಿ ತಯಾರಾಗುವ 'ವೇಸೋಆಕ್ಟೀವ್ ಇಂಟೆಸ್ಟೈನಲ್ ಪಾಲಿಪೆಪ್ಟೈಡ್' ಎಂಬ ಚೋದಕವು ಮಿದುಳಿನ ಮೇಲೆ ಪ್ರಭಾವ ಬೀರಿ ಕರುಣೆಯನ್ನು ಹುಟ್ಟಿಸುತ್ತದೆ. ಈ ಚೋದಕವು ಎಲ್ಲಾ ಮಾನವರಲ್ಲಿ, ಕರುಳು ಚುರ್ ಎಂದ ಸಂದರ್ಭದಲ್ಲಿ, ಸಾಕಷ್ಟು ಪ್ರಮಾಣದಲ್ಲಿ ಉತ್ಪತ್ತಿಯಾಗಿದ್ದಿದ್ದರೆ ಸಮತೆಯ ಹೂವು ಅರಳುತ್ತಿತ್ತಲ್ಲವೇ?

ಕೋಟಗಾನಹಳ್ಳಿ ರಾಮಯ್ಯನವರ 'ತಲಪರಿಗೆ' ಕೃತಿ, ಲಂಕೇಶರ 'ಉಲ್ಲಂಘನೆ' ಕಥೆ, ಚಂಪಾ ಅವರೊಂದಿಗಿನ ಜಗಳ, ಅಗ್ನಿ ಶ್ರೀಧರ್ ಅವರೊಂದಿಗಿನ ಭಿನ್ನಾಭಿಪ್ರಾಯ, ಕಟ್ಟಡ ಕಾರ್ಮಿಕರ ಬವಣೆಗಳು, ಬಾಲ್ಯದಲ್ಲಿ ಬಸವರಾಜ ಕೆಸ್ತೂರರ 'ನಂಜುಂಡ ನಕ್ಕಾಗ' ಸಿನಿಮಾ ನೋಡಿ ಖುಷಿಪಟ್ಟಿದ್ದು, ಒಳಮೀಸಲಾತಿಯ ಪರ ಇರಬಹುದಾದ ಮನಸುಗಳೊಂದಿಗೆ ಮಾತನಾಡಿದ್ದು, ಅಸ್ಪೃಶ್ಯತೆ ಕುರಿತಂತೆ ರಾಜಕಾರಣಿ ದಿವಂಗತ ಕೆ. ಎಚ್. ರಂಗನಾಥರ 'ಅಸ್ಪೃಶ್ಯತೆಯ ಗಾಯ ಮಾಡಿದೋರ್ನ ಕೇಳಿ, ನನ್ನನ್ನೇಕೆ ಕೇಳ್ತೀರಿ?' ಎಂಬ ಮಾತಿನ ಪ್ರತಿಧ್ವನಿ, ದಲಿತರೆನ್ನುವ ಕಾರಣಕ್ಕೆ ರಾಷ್ಟ್ರಪತಿಗಳಾಗಿದ್ದ ಕೆ.ಆರ್. ನಾರಾಯಣನ್ ಅವರಿಗಾದ ನೋವು, ಪ್ರೊ. ಬಿ. ಕೃಷ್ಣಪ್ಪ ಮತ್ತು ಚಂದ್ರಪ್ರಸಾದ್ ತ್ಯಾಗಿಯವರಿಂದ ಪ್ರಭಾವಿತರಾದದ್ದು, ದಸಂಸದೊಂದಿಗಿನ ಒಡನಾಟ, ದೇವನೂರ ಮಹಾದೇವರ ಕುರಿತ ಒಲುಮೆ, ಬಾಬಾಸಾಹೇಬರ ಪುತ್ಥಳಿ ಅನಾವರಣದ ಕುರಿತ ನುಡಿಗಳು, ಸಿದ್ಧಲಿಂಗಯ್ಯನವರ ಮಾನವೀಯತೆ ಹಾಗೂ ಕಾವ್ಯ ಕುರಿತ ಲೇಖನ, ಗೌಡರ ಕುಟುಂಬವನ್ನು ಸುರಿವ ಮಳೆಯಲ್ಲಿ ಹೊಳೆ ದಾಟಿಸಿ ಕಾಪಾಡಿ ಮಾರನೇ ದಿನ ಸುಬ್ಬುವಿನ ಅಜ್ಜ ಗೌಡರಿಂದ ಕೆನ್ನೆಗೆ ಬಾರಿಸಿಕೊಂಡ ಚಲನಚಿತ್ರದಂತಹ ಘಟನೆ, ಕವಿ ವೀರಣ್ಣ ಮಡಿವಾಳರ, ಸುಬ್ಬು ಅವರ ಪ್ರಯತ್ನದಲ್ಲಿ ಬಡ ಬಾಲಕಿಯೊಬ್ಬಳ ಶಿಕ್ಷಣ ಮುಂದುವರೆದು ಆಕೆ ಉದ್ಯೋಗ ದಕ್ಕಿಸಿಕೊಂಡಿದ್ದು ಹಾಗೂ ಇನ್ನಷ್ಟು ಹೃದಯಸ್ಪರ್ಶಿ ವಿಚಾರಗಳು ಸಂಕಲನದ ಹಲವು ಲೇಖನಗಳಲ್ಲಿ ಅನಾವರಣಗೊಂಡಿವೆ.

'ದುಃಖ ಆರದ ನೆಲದಲ್ಲಿ' ಕೃತಿಯು ಒಂದು ಅನುಭವ ಕಥನ. ಮನದಾಳದ ವೇದನೆಯ ನಿವೇದನೆಗಳು ಅಲ್ಲಿವೆ. ಬಹುತೇಕ ಲೇಖನಗಳು 'ಅಸ್ಪೃಶ್ಯರಿಗೆ ದುಃಖ ಎಂಬುದು ಕಟ್ಟಿಟ್ಟ ಬುತ್ತಿ' ಎಂಬಂತಿವೆ. ಅಂತಹ ದುಃಖ ಆರಲಿ ಎಂಬ ಆಶಯವಿದೆ. ದಲಿತ ಚಳವಳಿಯ ಹೊಸ ತಲೆಮಾರಿನ ಕಾರ್ಯಕರ್ತರಿಗೆ ಕೃತಿಯ ವಿವರಗಳ ಅಗತ್ಯವಿದೆ.

ಈ ಬರಹದ ಆರಂಭದಲ್ಲಿ ವಿವರಿಸಲಾದ ಸುಖ-ದುಃಖಗಳ ಜೀವರಾಸಾಯನಿಕ ಅಥವಾ ಶರೀರಕ್ರಿಯಾ ವಸ್ತುಗಳ ಹಿನ್ನೆಲೆಯಲ್ಲಿ 'ದುಃಖ ಆರದ ನೆಲದಲ್ಲಿ' ಕೃತಿಯನ್ನು ಗಮನಿಸಬೇಕಿದೆ. ಸರ್ಕಾರದಲ್ಲಿ ನೀತಿನಿರೂಪಣೆ ಮಾಡುವವರಿಗೆ, ಶಾಸನ ರೂಪಿಸುವವರಿಗೆ, ಕಾನೂನು, ನಿಯಮಗಳನ್ನು ರಚಿಸುವವರಿಗೆ, ಅವುಗಳನ್ನು ಜಾರಿ ಮಾಡುವವರಿಗೆ, ಇಂತಹ ವೈಜ್ಞಾನಿಕ ಮಾಹಿತಿಯ ಅರಿವು ಸ್ವಲ್ಪವಾದರೂ ಅಗತ್ಯ. ಮಾನವೀಯತೆಯ ಗುಣ ಮೆರೆಯಲಿ. ಆಗ 'ಆನಂದಮೈಡ್' ಮತ್ತಿತರ ಸಂತೋಷದ ಜೀವರಾಸಾಯನಿಕ ವಸ್ತುಗಳು ಎಲ್ಲರಲ್ಲೂ ಸಮಾನವಾಗಿ ತಯಾರಾಗಿ 'ಸಾಮಾಜಿಕ ನ್ಯಾಯ'ಕ್ಕೆ ನಿಜವಾದ ಅರ್ಥ ಬಂದೀತು. ವೈಜ್ಞಾನಿಕ ಯುಗದಲ್ಲಿ ಸಾಮರಸ್ಯದ ಬದುಕು ಬೆಳಗೀತು. ●